





# ನೀಲಿ ಡ್ರ್ಯಾಗನ್ ನದಿ!

ದಕ್ಷಿಣ ಪೋರ್ಚುಗಲ್‌ನ ಸ್ಪೇನ್ ಗಡಿಯಲ್ಲಿರುವ ಒಡೆಲೈಟ್ ನದಿಯ ಚಿತ್ರವೊಂದನ್ನು ವಿಮಾನದಲ್ಲಿ ಪ್ರಯಾಣಿಸುತ್ತಿದ್ದವನೊಬ್ಬ ಕ್ಯಾಮೆರಾದಲ್ಲಿ ಸೆರೆಹಿಡಿದ. ಆಮ್‌ಸ್ಟರ್‌ಡ್ಯಾಮ್‌ನಿಂದ ಮರ್ರಾಕೆಚ್‌ಗೆ ವಿಮಾನದಲ್ಲಿ ಹಾರುತ್ತಿರುವಾಗ ಈ ದೃಶ್ಯವನ್ನು ಕ್ಲಿಕ್ಕಿಸಲಾಗಿತ್ತು. ಅದನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟ. ಅದನ್ನು ವೀಕ್ಷಿಸಿದ ಚೀನೀಯರಿಗೆ ರೋಮಾಂಚನವಾಯಿತು. ಏಕೆ ಗೊತ್ತೇ? ಈ ನದಿಯ ಹರಿದಾಟ ಚೀನಿಯರ ಪವಿತ್ರ ಡ್ರ್ಯಾಗನ್‌ನನ್ನು ಹೋಲುತ್ತಿತ್ತು.

ಮೊದಲಿಗೆ ಜಾಲತಾಣದಲ್ಲಿ ಡ್ರ್ಯಾಗನ್ ಹೋಲುವ ಚಿತ್ರವನ್ನು ಕಂಡ ಚೀನೀಯರು ಈ ನದಿ ಚೀನಾದಲ್ಲಿದೆ ಎಂದು ಭಾವಿಸಿದ್ದರು. ಅನಂತರ ದಕ್ಷಿಣ ಪೋರ್ಚುಗಲ್‌ನ ಒಡೆಲೈಟ್ ನದಿಯೆಂದು ಗೊತ್ತಾಯಿತು.

ಡ್ರ್ಯಾಗನ್‌ನ ತಲೆಯು ಒಡೆಲೈಟ್‌ನ ಸಣ್ಣ ಪ್ರದೇಶದ ಕೊನೆಗಿದೆ. ಒಡೆಲೈಟ್ ನದಿಯನ್ನು ನೀಲಿ ಡ್ರ್ಯಾಗನ್ ನದಿಯೆಂದೂ ಕರೆಯುತ್ತಾರೆ.

ಈ ನದಿಯ ದರ್ಶನದಿಂದ ಸುದೈವ ಪ್ರಾಪ್ತಿಯಾಗಲಿದೆಯೆಂದು ಭಾವಿಸಿದ್ದರಿಂದ ನಿರಂತರವಾಗಿ ಈ ಚಿತ್ರ ಜಾಲತಾಣದಲ್ಲಿ ಹರಿದಾಡುತ್ತಿದೆ.

■ **ಪ್ರಕಾಶ ಎಸ್.ಮನ್ನಂಗಿ**